(ಆ) ವಿಷಯ: ರೈತರು ಬೆಳೆ ವಿಮೆ ಹಣವನ್ನು ಕಟ್ಟುವುದಕ್ಕೆ ಅವಧಿಯನ್ನು ವಿಸ್ತರಣೆ ಮಾಡುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಿದ್ದರಾಮಯ್ಯನವರು ಸದನಕ್ಕೆ ಬಂದಿದ್ದಾರೆ. ಈ ದಿನಾಂಕ: 31.3.2005ಕ್ಕೆ ಈ ತಿಂಗಳು ಬೆಳೆಯ ವಿಮೆ ಹಣವನ್ನು ಕಟ್ಟುವುದಕ್ಕೆ, ಪ್ರೀಮಿಯಮ್ ಹಣವನ್ನು ಕಟ್ಟುವಂಥಾದ್ದಕ್ಕೆ ಇವತ್ತು ಕೊನೆಯ ದಿನಾಂಕವಾಗಿದೆ. ಇನ್ನು ಒಂದು ತಿಂಗಳು ಈ ಬೆಳೆ ವಿಮೆ ಹಣವನ್ನು ಕಟ್ಟುವಂಥಾದ್ದಕ್ಕೆ, ಈ ಪ್ರೀಮಿಯಮ್ ಹಣವನ್ನು ಕಟ್ಟುವುದಕ್ಕೆ, ನೀವು ಫೋಟೋ ನೋಡಿರಬೇಕು. ಎಲ್ಲಾ ತಾಲ್ಲೂಕುಗಳ ಕೋ–ಆಪರೇಟಿವ್ ಸೊಸೈಟಿಗಳ ಮುಂದೆ, ಎಲ್ಲಾ ರೈತರು ಸಾಲಾಗಿ ಹಗಲು ರಾತ್ರಿ ನಿಂತಿದ್ದಾರೆ. ಇದನ್ನು ಮೇಲ್ಮನೆಯಲ್ಲಿ ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳಿದ್ದಾರೆ. ತಾವು ಒಂದು ತಿಂಗಳು ಈ ಬೆಳೆ ವಿಮೆ ಹಣವನ್ನು ಕಟ್ಟುವಂಥಾದ್ದನ್ನು ಎಕ್ಸ್‌ಟೆಂಡ್ ಮಾಡಿದರೆ, ರೈತರು ಆವಾಗ ಶಾಂತವಾಗಿ ಬೆಳೆ ವಿಮೆಯ ಹಣವನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ. ಅನೇಕ ಕಡೆಗಳಲ್ಲಿ ಅತಿವೃಷ್ಟಿ, ಗೊಂದಲದಲ್ಲಿ ಇರುವ ಸಮಯದಲ್ಲಿ, ಇದನ್ನು ಎಕ್ಸ್‌ಟೆಂಡ್ ಮಾಡುವ ಅಗತ್ಯವಿದೆ. ಆದುದರಿಂದ ಮುಂದಿನ ತಿಂಗಳು ಕೊನೆಯವರೆಗೂ ಈ ಅವಧಿಯನ್ನು ವಿಸ್ತರಣೆ ಮಾಡಬೇಕು. ಇವತ್ತು ಸದನದಲ್ಲಿ ತಾವು ಉತ್ತರವನ್ನು ಕೊಟ್ಟು, ಈ ಮೆಸೇಜ್ ಇವತ್ತು ಅಲ್ಲಿಗೆ ಹೋದರೆ ಅನುಕೂಲವಾಗುತ್ತದೆ ಮತ್ತು ಇದರಿಂದ ಅವರಿಗೂ ಪ್ರೀಮಿಯಮ್ ಹಣವನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಯಡಿಯೂರಪ್ಪನವರೇ, ಹಣವನ್ನು ಬಿಡುಗಡೆ ಮಾಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನಾವು ಹಣ ಬಿಡುಗಡೆಯ ಬಗ್ಗೆ ಕೇಳಿಲ್ಲ. ಬೆಳೆ ವಿಮೆ ಹಣವನ್ನು ಕಟ್ಟುವುದಕ್ಕೆ ಅವಧಿಯನ್ನು ವಿಸ್ತರಣೆ ಮಾಡುವ ಬಗ್ಗೆ, ಅದನ್ನು ಒಂದು ತಿಂಗಳು ಎಕ್ಸ್‌ಟೆಂಡ್ ಮಾಡಿ ಎಂದು ಹೇಳುತ್ತಿದ್ದೇವೆ. ನಾವು ದುಡ್ಡು ಎಂದು ಕೇಳುತ್ತಾ ಇಲ್ಲ, ಇವತ್ತು ಅದು ಲಾಸ್ಟ್ ಡೇಟ್ ಆಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರ ಜೊತೆಗೆ ಮಾತನಾಡಿ, ನಾನು ಅವರಿಗೆ ಸೂಚನೆಯನ್ನು ಕೊಡುತ್ತೇನೆ. ರೈತರಿಗೆ ಹಣ ಕಟ್ಟುವುದಕ್ಕೋಸ್ಕರ ಇನ್ನೂ ಸ್ವಲ್ಪ ಟೈಮ್ ನಾವು ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಿದ್ದರಾಮಯ್ಯನವರೇ, ಈಗ ತಾವು ಟೈಮನ್ನು ಏನು ಎಕ್ಸ್‌ಟೆಂಡ್ ಮಾಡುತ್ತೀರಲ್ಲಾ, ಆ ಸಂದರ್ಭದಲ್ಲಿ ಬೆಳೆಯಲ್ಲಿ ಕೆಲವನ್ನು ಬಿಟ್ಟು ಬಿಡುತ್ತಾರೆ. ಯಾವುದು ಇದ್ದವು ಅವನ್ನು ಕಂಟಿನ್ಯೂ ಮಾಡುವುದಕ್ಕೆ ತಾವು ಹೇಳಿ.

ಶ್ರೀ ಸಿದ್ದರಾಮಯ್ಯ : ನಾನು ಈಗ ಹೊಸದನ್ನು ಮಾಡುವುದಕ್ಕೆ ಹೇಳಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಉಪಮುಖ್ಯಮಂತ್ರಿಗಳು ಜೆ.ಐ.ಸಿ.ಯವರೊಂದಿಗೂ ಮಾತನಾಡುವಂತಹ ಕ್ರಮವನ್ನು ತೆಗೆದುಕೊಳ್ಳುತ್ತಾರೆಂಬ ಮಾತನ್ನು ಈಗ ಹೇಳಿದ್ದಾರೆ. ಈಗ ಜೆ.ಐ.ಸಿ.ಯವರು ಒಪ್ಪಬೇಕಾಗುತ್ತದೆ, ಕೇಂದ್ರ ಸರ್ಕಾರವೂ

ಒಪ್ಪಿಕೊಳ್ಳಬೇಕಾಗುತ್ತದೆ. ಇದನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ಮಾಡುತ್ತಾರೆ. ಇದರ ಜೊತೆಗೆ ಕೆಲವು ಬೆಳೆಗಳು ಏನು ಸೇರಬೇಕು, ಅದರಲ್ಲಿ ಕೇಂದ್ರ ಸರ್ಕಾರದವರು ಕಳೆದ ಸಾರಿ ಹತ್ತಿಯನ್ನು ಸೇರಿಸಿರಲಿಲ್ಲ. ಈ ಸಲ ಹತ್ತಿ ಬಂದಿದೆ. ಹಾಗೆ ಹೊಸ ಹೊಸ ಬೆಳೆಗಳನ್ನು.....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಈಗ 31ನೇ ತಾರೀಖು ಎಂದು ಏನು ಲಾಸ್ಟ್ ಡೇಟ್ ಇದೆ, ಯಾವ್ಯಾವ ಕ್ರಾಪ್ ಮೇಲೆ ಪ್ರೀಮಿಯಮ್ ಹಣವನ್ನು ತುಂಬಬೇಕಲ್ಲಾ, ಆ ಕ್ರಾಪ್ ಸಿಸ್ಟಂ ಅನ್ನು ಕಂಟಿನ್ಯೂ ಮಾಡಬೇಕು. ಕೆಲವೊಂದು ಕ್ರಾಪ್‌ಗಳನ್ನು ತೆಗೆದುಬಿಡುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಇಲ್ಲ, ಯಾವುದನ್ನೂ ತೆಗೆದಿಲ್ಲ, ಈ ಸಾರಿ ಹತ್ತಿ ಒಂದು ಜಾಸ್ತಿ ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಒಮ್ಮೊಮ್ಮೆ ಕೆಲವು ಐಟಂಗಳನ್ನು ತೆಗೆದುಬಿಡುತ್ತಾರೆ. ಅವುಗಳನ್ನು ಯಾವುದೂ ತೆಗೆಯದ ಹಾಗೆ ಟೈಮ್ ಎಕ್ಸ್‌ಟೆನ್‌ಶನ್ ಆಗಬೇಕು.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಆದ ಚರ್ಚೆಗೆ ಉತ್ತರ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲೆ ಉತ್ತರವನ್ನು ಪ್ರಾರಂಭ ಮಾಡುವ ಮೊದಲು, ಚುನಾವಣಾ ಪ್ರಸ್ತಾವ ಇದೆ.

3. ಚುನಾವಣಾ ಪ್ರಸ್ತಾವ

(ಅ) ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ದಿ: 19.7.2005ರಂದು ವಿಧಾನಸಭೆಯ ವಿವಿಧ ಸಮಿತಿಗಳನ್ನು ರಚಿಸಲು ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ವಿಧಾನಸಭೆಯ ವಿವಿಧ ಸಮಿತಿಯ ಸಭೆಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:– "ವಿಧಾನಸಭೆಯ ವಿವಿಧ ಸಮಿತಿಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಈ ಸದನವು ಸನ್ಮಾನ್ಯ ಸಭಾಧ್ಯಕ್ಷರಿಗೆ ಅನುಮತಿಯನ್ನು ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಆ) ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ,

"ಅಂಗವಿಕಲರ ಅಧಿನಿಯಮ 1995ನ್ನು ಅನುಷ್ಠಾನಗೊಳಿಸಲು ರಚಿಸಲಾಗಿರುವ ರಾಜ್ಯ ಸಮನ್ವಯ ಸಮಿತಿಗೆ, ಅಂಗವಿಕಲರ ಅಧಿನಿಯಮದ ಕಲಂ 13(2)(ಜಿ) ರಲ್ಲಿನ ಅವಕಾಶದಂತೆ ಇಬ್ಬರು ಸದಸ್ಯರನ್ನು ಚುನಾಯಿಸಲು ದಿನಾಂಕ 4.7.2005ರಂದು ಪ್ರಸ್ತಾವನೆಯನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮದ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಅಂಗವಿಕಲರ ರಾಜ್ಯ ಸಮನ್ವಯ ಸಮಿತಿಗೆ ಇಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.